DOC-504
T-P-2

Reg No B G 155 1—7—72

55th Year of Publication ★ 'Satyavadi' daily, Mysore 4

In the State – The First
Golden Jubilee Celebrated Paper
★
News, Views, Dharmic Moral Ethical Matters



ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಸಂಭವಿಸಿದ
ಪತ್ರಿಕೆ

ಸ್ಥಾಪಕರು: ಅಕಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಪಾಕ'ನವರ ವಿಚಾರಣೆ ತಟಸ್ಥ ದೇಶದವರಿಂದ ನಡೆಯಬೇಕು.

ರಕ್ಷಿತವಾದ ಉಳಿತಾಯ

ಮೈಸೂರು— ರಕ್ಷಿತವಾದ ಉಳಿತಾಯ ಸ್ಕೀಮನ್ನು ಜಿಲ್ಲಾಧಿಕಾರಿಗಳಾದ ಶ್ರೀ ಕೃಷ್ಣರವರು ಉದ್ಘಾಟಿಸಿದರು.

●

ಹೆಣ್ಣು – ಗಂಡು

ನವದೆಹಲಿ— ದೇಶದಲ್ಲಿ ಒಟ್ಟು ಜನ ಸಂಖ್ಯೆಯಲ್ಲಿ ಗಂಡಸರೇ ಬಹುಸಂಖ್ಯೆಯಲ್ಲಿದ್ದರೂ, ದೇಶದ 36 ಜಿಲ್ಲೆಗಳಲ್ಲಿ ಗಂಡಸರಿಗಿಂತ ಹೆಂಗಸರೇ ಬಹುಸಂಖ್ಯೆಯಲ್ಲಿರುವರೆಂದು ಪ್ರಕಟವಾಗಿದೆ.

★

ಅಡಿಕೆ ಬೆಳೆಗಾರರ ತಾಪತ್ರಯ

ಬೆಂಗಳೂರು — ಸಿಲೋನಿನಿಂದ 500 ಟ್ ಅಡಿಕೆ ಆಮದು ಪುನಾರಂಭಿಸಲ್ಪಟ್ಟಿರುವುದರಿಂದ ಅಡಿಕೆ ಬೆಳೆಯುವವರಿಗೆ ತುಂಬಾ ನಷ್ಟವಾಗಿದ್ದು, ಬೆಲೆ ಕೆಜಿಗೆ ರೂ. 15 ರಿಂದ 4ಕ್ಕೆ ಇಳಿದಿರುವದೆಂದೂ ಫುಡ್ ಕಾರ್ಪೊರೇಷನ್ ಅಧ್ಯಕ್ಷ ಶ್ರೀ ಇ ಕ್ಬಾಲ್ ಸಿಂಗ್‌ರಿಗೆ ಶ್ರೀ ಶಿರಾಳಿ ಚಂದ್ರಶೇಖರ್ ಎಂ. ಎಲ್. ಎ ತಿಳಿಸಿದರೆಂಬ, ಆ ದಕ್ಕೆ ಅವರು, ವ್ಯವಸಾಯ ಮಂತ್ರಿಗಳೊಡನೆ ಪರ್ಯಾಲೋಚಿಸಿ, ಉಳಿತಾಯು ಅಡಕೆಯನ್ನು ಅಪರೆ ಬೆಲೆಗೆ ಕೊಂಡುಕೊಳ್ಳುವ ಭರವಸೆ ನೀಡಿದರೆಂದೂ ಗೊತ್ತಾಗಿದೆ.

★

ಹಾಲಿನಲ್ಲಿ ಹುಳುಗಳು

ಬೆಂಗಳೂರು ಶೇಷಾದ್ರಿಪುರದ ಶ್ರೀ ಎ. ವಿ. ತಲಾಂಗಿ ಒಂದು ಕ್ಷೀರ ಕೇಂದ್ರದ ಸ್ಥಳೀಯ ಏಜೆಂಟರಿಂದ ಕೊಂಡುಕೊಂಡ ಒಂದು ಲೀಟರು ಹಾಲಿನಲ್ಲಿ ಸಣ್ಣ ಸಣ್ಣ ಹುಳುಗಳು ಓಡಾಡುತ್ತಿದ್ದ ವಿಚಾರವನ್ನು ಡೈರಿ ಸೂಪರ್‌ವಿಂಡೆಂಟರ ಗಮನಕ್ಕೆ ತಂದರೆಂದು ವರದಿಯಾಗಿದೆ. ಈ ವಿಚಾರ ಪರಿಶೀಲನೆಯಲ್ಲಿದೆ

ಗ್ರಾಮಗಳು ಮುಳುಗಿಲ್ಲ

ಮೆಲಪ್ರಭಾ ಅಣೆಕಟ್ಟಿನಲ್ಲಿ ನೀರು ಆವಾಯದ ಮಟ್ಟವನ್ನು ಮೀರಿದ್ದರೂ ಯಾವುದೇ ಗ್ರಾಮವು ಮುಳುಗಡೆ ಆಗಿಲ್ಲವೆಂದು ವಿಧಾನ ಪರಿಷತ್‌ನಲ್ಲಿ ತಿಳಿಸಲಾಯಿತು. ಮುಳುಗಡೆ ಆದೀತೆಂದು ಶಂಕಿಸಲಾಗಿದ್ದ ಗ್ರಾಮಗಳಿಂದ ಜನರನ್ನು ಹೊರಕ್ಕೆ ತರಲಾಗಿದೆ ಎಂದು ತಿಳಿಸಲಾಯಿತು. ಮುಳುಗಡೆಯ ಭೀತಿಗೊಳಗಾಗಿರುವ ಗ್ರಾಮಗಳಿಗೆ ಬೇರೆ ಕಡೆ ಸ್ಥಳ ಕೊಡಲಾಗಿದೆಯೆಂಬೂ, ಭೂ ಪರಿಹಾರ ಕೊಡಲಾಗಿದೆಯೆಂದೂ, ನಾನಾ ಕಡೆ ಷೆಡ್‌ಗಳ ನಿರ್ಮಾಣವಾಗಿರುವುದಾಗಿಯೂ ತಿಳಿಸಲಾಯಿತು.

★

ಅಮೆರಿಕದ ಕರೆ

ವಿಶ್ವಸಂಸ್ಥೆಯಲ್ಲಿ ಹಣ ಮತ್ತು ಮಾನವ ಶಕ್ತಿ ನಷ್ಟದ ಜೊತೆಗೆ ಇನ್ನೂ ಅನೇಕ ತೀಕ್ಷ್ಣ ಕುಂದುಕೊರತೆಗಳಿದ್ದು ಅದನ್ನು ಸರಿಪಡಿಸಲು ತೀವ್ರ ಕಾರ್ಯಕ್ರಮ ಕೈಗೊಳ್ಳಬೇಕೆಂದು ಅಮೇರಿಕ ರಾಯಭಾರಿ ಜಾರ್ಜರವರು ತಿಳಿಸಿ, ಅಮೇರಿಕಾ ತಾನು ನೀಡುವ ಹಣದ ನೆರವನ್ನು ಕಡಿಮೆ ಮಾಡುವುದಾಗಿ ತಿಳಿಸಿದರೆಂದು ಜಿನೀವಾ ವಾರ್ತೆ ತಿಳಿಸುತ್ತದೆ

★

ಕಾರುಗಳ ಬೆಲೆ

ಅಂಬಾಸಿಡರ್ ಕಾರು ಬೆಲೆ ರೂ. 48 ಕಡಿಮೆ ಆಗಿದೆ ಫಿಯೆಟ್ ಬೆಲೆ ರೂ. 171 ಏರಿದೆ. ಸ್ಟ್ಯಾಂಡರ್ಡ್ ಹೆರಾಲ್ಡ್ ಬೆಲೆಯಲ್ಲಿ ವ್ಯತ್ಯಾಸವಿಲ್ಲ – ಎಂದು ನವದೆಹಲಿ ವಾರ್ತೆ ತಿಳಿಸುತ್ತದೆ.

★

ನೂತನ ಜಿಲ್ಲಾಧಿಕಾರಿಗಳು

ಮೈಸೂರು— ಶ್ರೀ ಡಿ. ಕೃಷ್ಣ ಐ. ಎಸ್. ಶುಕ್ರವಾರ ಜಿಲ್ಲಾಧಿಕಾರಿಗಳಾಗಿ ಅಧಿಕಾರ ವಹಿಸಿಕೊಂಡರು.

ಜೂರಿಸ್ಟ್ ಸಂಸ್ಥೆ ಕರೆ

ಮಾನವೀಯತೆ ಮೇಲೆ ನಡೆಸಿರುವ ಹಾಗೂ ಯುದ್ಧ ತಕ್ಷೀಕುಗಳಿಗಾಗಿ ಪಾಕಿ ಸ್ತಾನ ಅಧಿಕಾರಿಗಳು ಹಾಗೂ ನಾಗರೀಕರನ್ನು ವಿಚಾರಣೆಗೆ ಒಳಪಡಿಸಬೇಕಾದರೆ, ತಟಸ್ಥ ದೇಶಗಳ ಅಂತರರಾಷ್ಟ್ರೀಯ ನ್ಯಾಯಾಲಯು ಮುಂದಾಗಬೇಕೆಂದು ಜೂರಿಸ್ಟ್ ಅಂತರರಾಷ್ಟ್ರೀಯ ಆಯೋಗ ತಿಳಿಸಿರುವುದಾಗಿ ಜಿನೀವಾ ವಾರ್ತೆ ತಿಳಿಸುತ್ತದೆ.

★

ಚನ್ನಪ್ಪನವರ ವಿರೋಧ

ನೀರಿನ ದರ ಹೆಚ್ಚಿಸಬಾರದೆಂದು ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ ಸದಸ್ಯ ಶ್ರೀ ಚನ್ನಪ್ಪನವರು ತಿಳಿಸಿರುವರು

★

ಟ್ಯುಬೆಕ್ಟಮಿ ಶಿಬಿರ

ಮೈಸೂರು ಜಿಲ್ಲೆಯ ಕೆಲವು ಸ್ಥಳಗಳಲ್ಲಿ ಜುಲೈ ತಿಂಗಳಲ್ಲಿ ಟ್ಯುಬಕ್ಟಮಿ ಶಿಬಿರಗಳನ್ನು ಏರ್ಪಡಿಸಲಾಗಿದೆ.

★

ಪೌರಸಮಿತಿಗೆ ಬಹುಮತ

ಸಿಖ್ ಪುರಸಭೆ ಚುನಾವಣೆಗಳಲ್ಲಿ 5 ಸ್ಥಾನಗಳು ಕಾಂಗ್ರೆಸ್‌ಗೆ, 14 ಸ್ಥಾನಗಳು ಪುರಸಮಿತಿಗೆ ದೊರೆತಿವೆ.

★

ಪುರಸಭಾಧಿವೇಶನ

ಶುಕ್ರವಾರ ಶ್ರೀ ಸೋಮಸುಂದರಂರವರ ಅಧ್ಯಕ್ಷತೆಯಲ್ಲಿ ನಡೆದ ಪುರಸಭೆಯ ಅಧಿವೇಶನದಲ್ಲಿ ವಿಶ್ವವಿದ್ಯಾನಿಲಯವು ತನ್ನ ಕಾಲೇಜ್‌ಗಳಿಂದ ಉಪಾಧ್ಯಾಯರನ್ನು ತೆಗೆದುಹಾಕಿರುವುದನ್ನು ಖಂಡಿಸಿತು. ಜನವಾಸ ಮಾಡುವ ಸ್ಥಳಗಳ ಮಧ್ಯೆ ಹೆಂಡ ಅಂಗಡಿಗಳ ಸ್ಥಾಪನೆಯನ್ನು ಖಂಡಿಸಿ, ಸಕ್ಕರೆ ವಿತರಣೆ ಸರಿಯಾಗಿ ಆಗದಿರುವ ಕುರಿತು ಟೀಕಿಸಲಾಯಿತು.

ಉನ್ನತ ಮಟ್ಟದ ಸಭೆ

ಸಿಮ್ಲಾದಿಂದ ಬಂದಿರುವ ವರದಿಯ ಪ್ರಕಾರ ಉನ್ನತ ಮಟ್ಟದ ಮಾತುಕತೆ ನಡೆಯಿತೆ. ಕಟ್ಟಕಡೆ ಫಲಿತಾಂಶ ನೋಡಬೇಕು ಇಪತ್ತು ನಡೆಯುವ ಸಂಭವವಿದೆ

●

ಭುಟ್ಟೋರಿಗೆ ಅಸಂತೋಷ

ಜೊಂಚಾಲಿಂ ಕ್ರಿಕೆಟ್ ಸಂಘದವರು ಜೀವಾವಧಿ ಸದಸ್ಯತನದಿಂದ ತಮ್ಮನ್ನು ತೆಗೆದಿರುವುದನ್ನು ಕೇಳಿದ ಭುಟ್ಟೋರವರು ಸಿಮ್ಲಾದಲ್ಲಿ ತಮ್ಮ ಅಸಂತೋಷ ವ್ಯಕ್ತಪಡಿಸಿದರು.

●

ಕೆಲವೇ ಮಂದಿ ನಾಸ್ತಿಕರು

ನವದೆಹಲಿ— ಜಾತ್ಯತೀತ ಭಾರತದಲ್ಲಿ ಜಾತಿಯೇ ಇಲ್ಲದವರು 36083 ಮಂದಿ ಇದ್ದಾರೆಂದು ಪ್ರಕಟವಾಗಿದೆ

○

ಸಜೀವ ದಹನ

ಮಹರಾಸಿನ ಬಣ್ಣ ತಯಾರಿಸುವ ಕಂಪೆನಿಯಲ್ಲಿ ಅಗ್ನಿ ಅನಾಹುತದಿಂದ ಮೂರು ಮಂದಿ ಸಜೀವ ಸುಟ್ಟು ಸತ್ತರು ನಷ್ಟ ರೂ. 70 ಸಾವಿರ ಅಂದಾಜಾಗಿದೆ.

○

23 ಜನರ ಮರಣ

ಖಟಮಂಡುವಿಗೆ ಮುನ್ನೂರು ಕಿಲೋ ಮೀಟರು ದೂರದ ಗುಲ್ಮಿಯಲ್ಲಿ ಸಾಮೂಹಿಕ ಭೂಮಿ ಕುಸಿತದಲ್ಲಿ 23 ಜನ ಮರಣ ಹೊಂದಿದರು.

★

7 ಜನರ ಕೊಲೆ

ಬಹು ದಿನಗಳಿಂದ ಇದ್ದ ದ್ವೇಷದ ಫಲವಾಗಿ ಬಿಜಾಪುರದ ಕ್ವಲತ್ತಿ ಗ್ರಾಮದಲ್ಲಿ 7 ಮಂದಿ ಕೊಳೆ ಆಡರು 7 ಜನರ ಪಸ್ತುಗಿರಿ ಆಗಿದೆ.

ನೆಕ್ಸಲೈಟ್ ಖೈದಿಗಳು

ವಿಶಾಖಪಟ್ಟಣ – ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಂಗಳವಾರ ಪಾರ್ವತೀಪುರದ ನೆಕ್ಸಲೈಟರ ಪಿತೂರಿ ಮೊಖದ್ದಮೆ ವಿಚಾರಣೆಗೆ ಬಂದಾಗ 6 ಮಂದಿ ಆಪರಾಧಿಗಳು ರಾಜಕೀಯ ಘೋಷಣೆ ಕೂಗುತ್ತಾ, ಕ್ರಾಂತಿ ಹಾಡುಗಳನ್ನು ಹಾಡಿದರು.

ಚಿನ್ನಾಭರಣ ವಶ

ಮದ್ದೂರಿನಲ್ಲಿ ಒಬ್ಬ ಮಾರ್ವಾಡಿಯ ಅಂಗಡಿಯಿಂದ ಆ ಬ್ಯಾರಿ ಅಧಿಕಾರಿಗಳು ರೂ 40000 ಬೆಲೆಯ ಚಿನ್ನಾಭರಣಗಳನ್ನು ವಶಪಡಿಸಿಕೊಂಡರು – ಅಕ್ರಮ ಸಾಗಾಣಿಕೆಯ ಇವುಗಳನ್ನು ಒಣಹುಲ್ಲು ರಾಶಿಯಲ್ಲಿ ಮುಚ್ಚಿಡಲಾಗಿತ್ತು.

● ಹಾಂಕಾಂಗ್— ಲಂಕಾ ಪ್ರಧಾನಿ ಸಿರಿಮಾವೋರವರು, ಹಿಂದೂಸಾಗರವನ್ನು ಶಾಂತಿ ವಲಯವಾಗಿ ಘೋಷಿಸಬೇಕೆಂದ ಯೋಜನೆಗೆ ಚೀನಾ ಪ್ರಧಾನಿ ಚೌರ್ಇಲೈ ಬೆಂಬಲ ನೀಡುವುದಾಗಿ ಭರವಸೆಇತ್ತಿದಾರೆ

ಪ್ರತಿಷ್ಠಾಪನೆ

ತುಮಕೂರಿನಿಂದ ಬಂದಿರುವ ವರದಿ ಪ್ರಕಾರ, ಅಮ್ಮ ಸಮುದ್ರದಲ್ಲಿ ಮೈಸೂರು ಸೀಮೆಂಟ್‌ನವರು ನಿರ್ಮಿಸಿರುವ ಹೊಸದಾದ ದೇವಾಲಯದಲ್ಲಿ ಶ್ರೀ ಬಾಲಾಜಿ ವಿಗ್ರಹ ಪ್ರತಿಷ್ಠೆ ಮಾಡಲಾಯಿತು.

ಬಾಂಬು ನಿಲ್ಲುವುದಿಲ್ಲ

ಅಮೆರಿಕಾ ಅಧ್ಯಕ್ಷ ನಿಕ್ಸನ್ ವಾಷಿಂಗ್ಟನ್‌ನಲ್ಲಿ ಮಾತನಾಡುತ್ತಾ, ವಿಯಟ್ನಾಂ ಶಾಂತಿ ಮಾತುಕತೆಗೆ ಅಮೇರಿಕಾ ಹೋಗುವುದೆಂದೂ ಆದರೆ ಬಾಂಬು ಹಾಕುವುದು ಮುಂದುವರಿಯುತ್ತಿರುವುದೆಂದೂ ಪ್ರಕಟಿಸಿರುವರು.

ಆಸ್ತಿ ವಿತರಣೆ ಮಸೂದೆ

ನಗರ ಸಟಣಗಳ ಆಸ್ತಿ ವಿತರಣೆ ಮಸೂದೆಯನ್ನು ಈ ವರ್ಷದ ಕಡೆಯಲ್ಲಿ ತರುವ ಸಂಭವ ಇನೆ ಎಂದು ವಿಧಾನ ಪರಿಷತ್ತಿನಲ್ಲಿ ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸ್ ರವರು ತಿಳಿಸಿದರು.

ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ 'ಕಲ್ಪನೆ' ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ

— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ಚವರ ಜೊಚ್ಚಲು ಚಿತ್ರ

ಆನೆ – ಹುಡುಗ

SHAKTI

SUDHA

A Superb Tonic

ಅಖಿಲ ಭಾರತದಲ್ಲಿ ಕೂಡಲೇ

ಗೋವಧೆ ನಿಷೇಧವಾಗಲಿ

ವುಡ್‌ಲ್ಯಾಂಡ್ 30-6-72ರಿಂದ ಅಮೋಘ 9ನೇ ವಾರ

.... ಚಿತ್ರಾಕರ್ಷಕ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಸಂಡತಿಬಾಲಿ –
ನಿರ್ದೇಶನ: ರಾತಿ ಸಹೋದರರು ನಿರ್ಮಾಪಕರು: ಎಂ ಜೆ ಎಂ ಸಹೋದರರು

ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಮೊದಲಕಾತ್ರಿ

ಅಪೆರಾ 30 6 72 ರಿಂದ

ಜೆಮಿನಿವರ ಮಹೋನ್ನತ ತೆಲುಗು ವರ್ಣ ಚಿತ್ರ

ಕಲೆಕ್ಟರ್ ಜಾನಕಿ

ಪಾತ್ರ — ಜಮುನ, ಜಯಂತಿ, ರಮಾಪ್ರಭ, ನಿರ್ಮಲ, ಚಂದ್ರಿಕ, ಜಗ್ಗಯ್ಯ

ದಿನ 3 ಪ್ರದರ್ಶನಗಳು

Contribute Liberally
to the National Defence Fund



Help The Gorakshana

— Humanitarian Propoganda Monthly ....

Edited Printedand Published by Dharmapracharanirata
M S Krishna Rao (Propretor) at the Satvavadi Press
Chamarajapuram Mysore 4

Bank Road Bahusar A Fair Price Shop in Actual Practice